ಪಿಡಬ್ಲ್ಯೂ:2

ಇಂದು ದಿನಾಂಕಃ24.08.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ** ಪ್ರತಿವಾದಿಯರ ಪರ ಶ್ರೀ ಆರ್ ಬಿ ಕೆ ವಕೀಲರಿಂದಃ

ನನಗೆ ಅಂದಾಜು 40 ವರ್ಷ ವಯಸ್ಸಾಗಿರಬಹುದು. ವಾದಪತ್ರದಲ್ಲಿ ನನ್ನ ವಯಸ್ಸು 42 ಎಂದು ನಮೂದಿಸಿಲಾಗಿದೆ ಎಂದರೆ ಸರಿ. ನಾನು ಮತ್ತು ನನ್ನ ತಾಯಿ ಒಟ್ಟಿಗೆ ಹಿರೇಬೂದಿಹಾಳ ಎಂಬಲ್ಲಿ ವಾಸಮಾಡುತ್ತಿದ್ದೆವು. ದಿನಾಂಕ 04-03-1973 ರಲ್ಲಿ ಸರ್ವೆನಂ.73/2 ಕ್ಕೆ ಸಂಬಂದ ಪಟ್ಟ ಆಸ್ತಿಯು ನನ್ನ ತಾತನಿಂದ ನನ್ನ ತಾಯಿಗೆ ಬಂದಿರುತ್ತದೆ ಎಂದರೆ ಸರಿ. ಆ ರೀತಿ ಬಂದಂತಹ ಆಸ್ತಿಯನ್ನು ನನ್ನ ತಾಯಿ ನನ್ನ ತಂದೆಯ ಹೆಸರಿಗೆ ಖಾತೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅದರಂತೆ ಸದರಿ ಖಾತೆಯು ಡ.ನಂ. 1250 ರಂತೆ ನಮೂದು ಆಗಿರುತ್ತದೆ ಎಂದರೆ ಸರಿಯಲ್ಲ. ಆ ರೀತಿ ಬಂದ ಆಸ್ತಿಯ ಮೇಲೆ ನನ್ನ ತಂದೆ ಬ್ಯಾಂಕ್ ನಿಂದ ಲೋನ್ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಹಿರೇಬೂದಿಹಾಳ ಗ್ರಾಮದ ಡಿ ಬಿ ಪಿ ಎಂಬ ಸಹಕಾರ ಸಂಘದಲ್ಲಿ ಸರ್ವೆ ನಂ. 73/2, 57/6, 38/1 ಆಸ್ತಿಗಳನ್ನು ಅಡಮಾನ ಮಾಡಿ ಲೋನ್ ನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆ ರೀತಿ ಸಾಲ ಪಡೆದುಕೊಂಡ ಬಗ್ಗೆ ಡ.ನಂ.1392 ಎಂದು ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ನಂತರ ನನ್ನ ತಂದೆ ಸದರಿ ಜಮೀನನ್ನು ನನ್ನ ಹೆಸರಿಗೆ ಮಾಡಿರುತ್ತಾರೆ ಎದಂರೆ ಸರಿಯಲ್ಲ.

2. ನಂತರ ದಿನಾಂಕ 20-12-1987 ರಂದು ಪುನಃ ನಾನು ಮತ್ತು ನನ್ನ ತಾಯಿ ಸೇರಿ ನನ್ನ ತಂದೆಗೆ ಹಕ್ಕು ಬಿಟ್ಟುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಆ ಬಗ್ಗೆ ಡ.ನಂ.1700 ಎಂದು ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ. ದಿನಾಂಕ 09-03-1988 ರಲ್ಲಿ ನನ್ನ ತಂದೆ ಪ್ರತಿವಾದಿ 1 ರಿಂದ 4 ರವರ ಹೆಸರಿಗೆ ಮಾರಾಟ ಮಾಡಿ ಕ್ರಯ ಪತ್ರವನ್ನು ಮಾಡಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ನಾವು ಯಾವುದೇ ಜಮೀನನ್ನು ಬಿಟ್ಟು ಕೊಟ್ಟಿರುವುದಿಲ್ಲ ಹಾಗೂ ನಾವು ಈಗಲೂ ಸದರಿ ಆಸ್ತಿಯಲ್ಲಿ ಸ್ವಾಧೀನದಲ್ಲಿ ಇರುತ್ತೇವೆ ಎಂದು ನುಡಿದಿರುತ್ತಾರೆ. ಆ ದಿನದಂದು 12 ಸಾವಿರ ರೂಗಳು ಪ್ರತಿಫಲವನ್ನು ಪಡೆದುಕೊಂಡು ನನ್ನ ತಂದೆ ಅದೇ ದಿನ ಕಬ್ಜಾವನ್ನು ಪ್ರತಿವಾದಿಯರಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅದರಂತೆ ಹಿರೇಬೂದಿಹಾಳದ ಡ.ನಂ.1757 ರಂತೆ ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ. ಆ ರೀತಿ ಖರೀದಿ ಮಾಡಿರುವ ಕಾರಣದಿಂದ 1 ರಿಂದ 4 ನೇ ಪ್ರತಿವಾದಿಯರೇ ಈಗಲೂ ಕಬ್ಜಾದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ.

3. ದಾವಾ ಆಸ್ತಿಗೆ ಸಂಬಂದಪಟ್ಟ ಆರ್ ಟಿ ಸಿ, ಎಂ ಆರ್, ರಿಜಿಸ್ಟರ್ ಗಳನ್ನು ನಾನು ಇಲ್ಲಿಯವರೆಗೂ ನೋಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ದಾವಾ ಆಸ್ತಿಗಳ ಸಂಬಂದಪಟ್ಟ ದಾಖಲೆಗಳನ್ನು ನಾನು 2015 ರಲ್ಲಿ ನೋಡಿರುತ್ತೇನೆ. ಆಗ ಆರ್ ಟಿ ಸಿ ಗಳಲ್ಲಿ ಮಾಲೀಕರ ಹೆಸರು

ಬದಲಾದ ಬಗ್ಗೆ ನನಗೆ ಗೊತ್ತಾಗಿರುತ್ತದೆ ಎಂದು ನುಡಿದಿರುತ್ತಾರೆ. ನನಗೆ 18 ವರ್ಷ ತುಂಬಿ ಸುಮಾರು 20 ವರ್ಷಗಳಾಗಿರುತ್ತವೆ. ನಾನು ಪ್ರಾಪ್ತ ವಯಸ್ಕನಾದನಂತರ ನಮ್ಮ ತಾಯಿಗೆ ಸಂಬಂದಪಟ್ಟ ಆಸ್ತಿಗಳನ್ನು ನೋಡುವುದು ಮತ್ತು ಆರ್ ಟಿ ಸಿ ಗಳನ್ನು ತೆಗೆಯುವ ಕೆಲಸ ಮಾಡುವುದು ನಾನೇ ಮಾಡುತ್ತಿದ್ದೆ.

4. ದಾವಾ ಆಸ್ತಿಯನ್ನು ಹೊರತುಪಡಿಸಿ ನಮಗೆ ನಮ್ಮ ಕುಟುಂಬಕ್ಕೆ ಸಂಬಂದಿಸಿದಂತೆ ಸರ್ವೆನಂ. 57/4, 57/6, 90/2, 38/1 ಗಳು ಇರುತ್ತವೆ. ಸಾಕ್ಷಿಯು ಮುಂದುವರೆದು ಸರ್ವೆನಂ. 90/2 ಕ್ಕೆ ಸಂಬಂದಿಸಿದಂತೆ ನನ್ನ ಅಕ್ಕನಿಗೆ ಬಿಟ್ಟುಕೊಟ್ಟಿರುತ್ತೇನೆ. ಆ ರೀತಿ ನಾನು 2002 ರಿಂದ 2004 ರ ಒಳಗೆ ಬಿಟ್ಟುಕೊಟ್ಟಿರುತ್ತೇನೆ. ಉಳಿದ ಎಲ್ಲಾ ಆಸ್ತಿಗಳು ಪ್ರಸ್ತು ನನ್ನ ಹೆಸರಿನಲ್ಲಿಯೇ ಇರುತ್ತವೆ. ಸರ್ವೆನಂಬರ 73/2 ರ ಆಸ್ತಿಯ ಮಾಲೀಕತ್ವ ಬದಲಾಗಿರುವ ಬಗ್ಗೆ ನಾನು 2002 ಮತ್ತು 2004 ರಲ್ಲಿ ಗಮನಿಸಿರುವುದಿಲ್ಲ. ನಾನು ದಾವಾ ಆಸ್ತಿಯನ್ನು ಹೊರತುಪಡಿಸಿ ಬೇರೆ ಮೇಲೆ ಹೇಳಿದ ಆಸ್ತಿಗಳ ಮೇಲೆ ಬ್ಯಾಂಕ್ ಲೋನ್ ಪಡೆದುಕೊಂಡಿರುತ್ತೇನೆ. ಆ ರೀತಿ ಪ್ರಾಪ್ತ ವಯಸ್ಕ ನಂತರ ಪ್ರತೀ ವರ್ಷ ಬ್ಯಾಂಕ್ ಲೋನ್ ನ್ನು ಪಡೆದುಕೊಳ್ಳುತ್ತಿದ್ದೆ. ದಾವಾ ಆಸ್ತಿಯು ನನ್ನದಲ್ಲದಿದ್ದಕಾರಣದಿಂದ ಸದರಿ ದಾವಾ ಆಸ್ತಿಯ ಆದಾರದ ಮೇಲೆ ಯಾವುದೇ ಲೋನ್ ನ್ನು ಪಡೆದುಕೊಂಡಿಲ್ಲ ಎಂದರೆ ಸಾಕ್ಷಿಯು ನಾನಾಗಲಿ ಅಥವಾ ನನ್ನ ತಾಯಿಯಾಗಲೀ ಯಾರಿಗೂ ಸಹಿ ಮಾಡಿಕೊಟ್ಟಿರುವುದಿಲ್ಲ ಎಂದು ನುಡಿದಿರುತ್ತಾರೆ.

5. ನನ್ನ ತಂದೆ 2006 ನೇ ಸಾಲಿನಲ್ಲಿ ತೀರಿಕೊಂಡಿರುತ್ತಾರೆ. ವಿವಾಧಿತ ಆಸ್ತಿಯನ್ನು ಹೇಗೆ ಮಾರಾಟ ಮಾಡಿದರಿ ಎಂದು ಹೇಳಿ ನಿಮ್ಮ ತಂದೆಯ ಬಳಿ ನೀವು ಕೇಳಿದಿರಾ? ಎಂಬ ಪ್ರಶ್ನೆಗೆ ಸಾಕ್ಷಿಯು ನನ್ನ ತಂದೆಯು ಯಾರಿಗೂ ಆಸ್ತಿಯನ್ನು ಮಾರಾಟ ಮಾಡಿರುವುದಿಲ್ಲ ಎಂದು ನುಡಿದಿರುತ್ತಾರೆ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗಾಗಿ ಕಾಲವಕಾಶವನ್ನು ಕೋರಿದ್ದು ಅದರಂತೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.